**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ**
**ನ್ಯಾಯಾಲಯ ಚನ್ನರಾಯಪಟ್ಟಣ**

**ಉಪಸ್ಥಿತರು**

**ಶ್ರೀಮತಿ ಲಕ್ಷ್ಮಿ.ಎಂ.ವಿ**
ಬಿ.ಎ., ಎಲ್.ಎಲ್.ಬಿ.
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ

**ತೀರ್ಪಿನ ದಿನಾಂಕಃ 12 ನೇ** ಫೆಬ್ರವರಿ **2020**

**ಅಸಲು ದಾವಾ ನಂ. 406/2015**

**ವಾದಿ:** ತಿಮ್ಮೇಗೌಡ ಬಿನ್ ಬಿ. ವೆಂಕಟೇಗೌಡ ಉಃ ಸಣ್ಣವೆಂಕಟೇಗೌಡ,
ಸುಮಾರು 40 ವರ್ಷ ವಯಸ್ಸು,
ಲೋಕನಹಳ್ಳಿ ಗ್ರಾಮ,
ಹಾಲಿವಾಸಃ ಬಿದರಹಳ್ಳಿ ಗ್ರಾಮ, ಕಿಕ್ಕೇರಿ ಹೋಬಳಿ,
ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.

( ವಾದಿ ಪರ ಶ್ರೀ ಎಲ್.ಪ್ರಕಾಶ ಗೌಡ., ವಕೀಲರು ., )

**-ವಿರುದ್ಧ-**

**ಪ್ರತಿವಾದಿಃ** ವೆಂಕಟರಾಮ ಬಿನ್ ಬಿ. ವೆಂಕಟೇಗೌಡ ಉಃ ಸಣ್ಣವೆಂಕಟೇಗೌಡ,
ಸುಮಾರು 60 ವರ್ಷ ವಯಸ್ಸು,
ರಾಮಕೃಷ್ಣ ಲೇಔಟ್, ಗಾಂಧಿ ಸರ್ಕಲ್,
ಚನ್ನರಾಯಪಟ್ಟಣ ಟೌನ್ ಮತ್ತು ತಾಲ್ಲೂಕು,

( ಪ್ರತಿವಾದಿ ಪರ ಎಸ್.ಆರ್.ಶ್ರೀನಿವಾಸ ವಕೀಲರು)

| | | |
|---|---|---|
| 1.ದಾವಾ ದಾಖಲು ಮಾಡಿದ ದಿನಾಂಕ | : | 08-09-2015 |
| 2. ದಾವೆಯ ಸ್ವರೂಪ | : | ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ |
| 3. ಸಾಕ್ಷ್ಯ ಪ್ರಾರಂಭವಾದ ದಿನಾಂಕ | : | 14-12-2016 |
| 4. ತೀರ್ಪು ನೀಡಿದ ದಿನಾಂಕ | : | 12-02-2020 |

| | | | | |
|---|---|---|---|---|
| 5. ಒಟ್ಟು ತೆಗೆದುಕೊಂಡ ಸಮಯ | : | <u>ವರ್ಷ</u> | <u>ತಿಂಗಳು</u> | <u>ದಿನ</u> |
| | | 04 | 05 | 04 |

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**<u>ತೀರ್ಪು</u>**

ದಾವಾ ಅನುಸೂಚಿ ಸ್ವತ್ತಿಗೆ ವಾದಿಯೇ ಹಕ್ಕುದಾರರು ಮತ್ತು ಮಾಲೀಕದಾರರು ಎಂದು ಘೋಷಿಸಬೇಕೆಂದು ಹಾಗೂ ದಾವಾ ಅನುಸೂಚಿ ಸ್ವತ್ತಿಗೆ ಪ್ರತಿವಾದಿಯಾಗಲೀ, ಅವರ ಕಡೆ ಯಾರೇ ಆಗಲೀ ಅತಿಕ್ರಮ ಪ್ರವೇಶ ಮಾಡಿ ಅಡ್ಡಿ ಆತಂಕ ತಂಟೆ ತಕರಾರು ಉಂಟು ಮಾಡದಂತೆಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಕೋರಿದ್ದಾರೆ.

2. **<u>ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ</u>**

ದಾವಾ ಅನುಸೂಚಿ ಸ್ವತ್ತು ಮೂಲತಃ ಚನ್ನರಾಯಪಟ್ಟಣ ಟೌನ್ ರಂಗೇಗೌಡರವರ ಮಗನಾದ ಸಿ.ಆರ್. ರಂಗಪ್ಪರವರಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ವಾದಿಯು ದಿಃ 22-10-1981 ರಂದು ನೋಂದಾಯಿತ ಕ್ರಯಪತ್ರ ಸಂಖ್ಯೆ 436/81-82 ರಂತೆ ಸಂಪುಟ ಸಂಖ್ಯೆ 2285 ರಂತೆ ಕ್ರಯಕ್ಕೆ ಪಡೆದುಕೊಂಡಿದ್ದು ಕ್ರಯಕ್ಕೆ ಪಡೆದ ಲಾಗಾಯ್ತು ವಾದಿಯು ಸದರಿ ಸ್ವತ್ತಿನ ಖಾತೆಯನ್ನು ಚನ್ನರಾಯಪಟ್ಟಣದ ಪುರಸಭೆಯಲ್ಲಿ ಖಾತಾ ವಗೈರೆ ಮಾಡಿಸಿಕೊಂಡು ಸ್ವತ್ತಿನ ಹಕ್ಕುದಾರ ಮಾಲೀಕದಾರರೂ ಆಗಿ ಅನುಭವಿಸಿಕೊಂಡು ಬರುತ್ತಿದ್ದು, ವಾದಿಯ ಹೆಸರಿಗೆ ಖಾತಾ ನಂ. 2060 ರಂತೆ ಎ.ಆರ್.ನಂ. 2360 ರಂತೆ ಪೂರ್ವ- ಪಶ್ಚಿಮ 76 ಅಡಿ ಮತ್ತು ಉತ್ತರ -ದಕ್ಷಿಣ 20 ಅಡಿ ಮತ್ತು ಇದಕ್ಕೆ ಲಗತ್ತು ಈ ಜಾಗದಲ್ಲಿರುವ ಔಟ್ ಹೌಸ್ ಮನೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಖಾತೆ ವಗೈರೆ ಮಾಡಿಕೊಂಡು ಕಂದಾಯ ವಗೈರೆ ಕ್ರಮಾಂಕ ಸಂಖ್ಯೆ 2174 ರಂತೆ ಆಸ್ತಿಯ ಸಂಖ್ಯೆ 1634 ರಂತೆ ಅನುಭವಿಸಿಕೊಂಡು ಬರುತ್ತಿರುತ್ತಾರೆ. ಸದರಿ ದಾವಾ ಸ್ವತ್ತಿನ ಮೇಲೆ

ಪ್ರತಿವಾದಿಗೆ ಯಾವುದೇ ರೀತಿಯ ಹಕ್ಕು , ಮಾಲೀಕತ್ವ, ಸ್ವಾಧೀನವಾಗಲೀ ಇರುವುದಿಲ್ಲ. ಆದರೂ ಸಹ ಕೆಲವು ಪುರಸಭಾ ಅಧಿಕಾರಿಗಳನ್ನು ಷರೀಖು ಮಾಡಿಕೊಂಡು ವಾದಿಯ ಹೆಸರನ್ನು ಹೊಡೆದು ಹಾಕಿ ಮೋಸದಿಂದ ವೆಂಕಟರಾಮ ಬಿನ್ ವೆಂಕಟೇಗೌಡ ಎಂದು ನಮೂದು ಮಾಡಿಕೊಂಡು ತಮ್ಮ ಹೆಸರಿಗೆ ಸುಳ್ಳು ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ.

3. ವಾದಿಯು ಪುರಸಭಾ ಅಧಿಕಾರಿಗಳಿಗೆ ದಾವಾ ಸ್ವತ್ತಿನ ಖಾತೆಯನ್ನು ವರ್ಗಾವಣೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದರೂ ಪುರಸಭಾ ಅಧಿಕಾರಿಗಳು ಪ್ರತಿವಾದಿಯೊಂದಿಗೆ ಷರೀಖಾಗಿ ಕಾಲಹರಣ ಮಾಡುತ್ತಾ ಬರುತ್ತಿರುತ್ತಾರೆ. ವಿದ್ಯಮಾನಗಳು ಹೀಗಿರುವಾಗ ವಾದಿಯ ದಾವಾ ಅನುಸೂಚಿ ಸ್ವತ್ತಿನ ನೆಮ್ಮದಿಯಾದ ಸ್ವಾಧೀನಾನುಭವಕ್ಕೆ ಅತಿಕ್ರಮ ಪ್ರವೇಶ ಮಾಡಿ ತಂಟೆ ತಕರಾರು ಉಂಟು ಮಾಡಿರುತ್ತಾರೆ. ವಾದಿಯು ಪ್ರತಿವಾದಿಗೆ ಪಂಚಾಯತಿದಾರರ ಸಮಕ್ಷಮ ಬುದ್ದಿವಾದ ಹೇಳಿಸಿದರೂ ಪ್ರತಿವಾದಿಯು ತನ್ನ ನಡವಳಿಕೆಯನ್ನು ನಿಲ್ಲಿಸಿರುವುದಿಲ್ಲ. ನಂತರ ವಾದಿಯು ಸಂಬಂಧಪಟ್ಟ ಪೋಲೀಸ್ ಠಾಣೆಗೆ ದೂರು ನೀಡಿದ್ದು ಸದರಿ ಪೋಲೀಸರು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿರುತ್ತಾರೆ. ಪ್ರತಿವಾದಿಯು ಹಣಬಲ, ಜನಬಲ ಮತ್ತು ರಾಜಕೀಯ ಬಲವುಳ್ಳ ವ್ಯಕ್ತಿಯಾಗಿದ್ದು, ವಾದಿಯ ಖಾಸಾ ಅಣ್ಣನಾಗಿರುತ್ತಾನೆ. ಆದ್ದರಿಂದ ಅನ್ಯಮಾರ್ಗವಿಲ್ಲದೇ ವಾದಿಯು ಪ್ರತಿವಾದಿಯ ವಿರುದ್ಧ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ.

**4.** ಪ್ರತಿವಾದಿಗೆ ನ್ಯಾಯಾಲಯದಿಂದ ದಾವಾ ಸಮನ್ಸ್ ಹೊರಡಿಸಿದ್ದು, ಸಮನ್ಸ್ ಜಾರಿಯಾಗಿದ್ದು, ಪ್ರತಿವಾದಿ ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿ ತಿಳಿಸುವುದೇನೆಂದರೆ, ವಾದಿಯು ತಂದಿರುವ ದಾವೆಯು ಕಾನೂನು ಹಾಗೂ ವಿದ್ಯಮಾನಗಳ ರೀತ್ಯಾ ನಿಲ್ಲತಕ್ಕದ್ದಲ್ಲ. ದಾವಾ ಪ್ಯಾರಾದ ಎಲ್ಲಾ ಅಂಶಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು ಪ್ರತಿವಾದಿ ತಿಳಿಸುವುದೇನೆಂದರೆ, ವಾದಿ ಮತ್ತು ಪ್ರತಿವಾದಿಯು ಖಾಸಾ ಅಣ್ಣ ತಮ್ಮಂದಿರಾಗಿದ್ದು ಅಲ್ಲದೇ ಅವರಿಗೆ ಕೃಷ್ಣೇಗೌಡ ಮತ್ತು ಗೋವಿಂದರಾಜು ಎಂಬ ಇಬ್ಬರು

ಸಹೋದರರಿದ್ದು, ವಾದಿ ಮತ್ತು ಪ್ರತಿವಾದಿಗೆ ಕೆ.ಆರ್.ಪೇಟೆ ತಾಲ್ಲೂಕು, ಸಂತೆ ಬಾಚಹಳ್ಳಿ ಹೋಬಳಿ ಲೋಕನಹಳ್ಳಿ ಗ್ರಾಮದಲ್ಲಿ ಮತ್ತು ಕಿಕ್ಕೇರಿ ಹೋಬಳಿ, ಬಿದರಹಳ್ಳಿ ಗ್ರಾಮದಲ್ಲಿ ಜಮೀನುಗಳಿರುತ್ತವೆ.

5. ದಾವಾ ಸ್ವತ್ತುಗಳು ಮತ್ತು ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ಅದನ್ನು ಕುಟುಂಬದಲ್ಲಿ ಒಬ್ಬರಿಗೊಬ್ಬರಿಗೆ ಸರಿ ಬಾರದೇ ಇದ್ದುದ್ದರಿಂದ ವಾದಿ ಮತ್ತು ಪ್ರತಿವಾದಿಯ ತಂದೆ ಸಣ್ಣ ವೆಂಕಟೇಗೌಡರು ಮರಣವಾದ ನಂತರ ವಾದಿ ಮತ್ತು ಪ್ರತಿವಾದಿ ಮತ್ತು ಅವರ ಸಹೋದರರು ಸೇರಿಕೊಂಡು ದಿಃ 16-05-1993 ರಂದು ಪಂಚಾಯತಿ ಪಾರಿಕತ್ತನ್ನು ಮಾಡಿಕೊಂಡಿದ್ದು, ಸದರಿ ಪಾಲು ಪಟ್ಟಿ ಪ್ರಕಾರ ದಾವಾ ಸ್ವತ್ತು ಮತ್ತು ಬಿದರಹಳ್ಳಿ ಗ್ರಾಮದ ಸರ್ವೆ.ನಂ. 56/1 ರಲ್ಲಿರುವ 0.20 ಗುಂಟೆ ಜಮೀನು ಮತ್ತು 51 ರಲ್ಲಿ 1 ಎಕರೆ 52/2 ರಲ್ಲಿ 1 ಎಕರೆ 20 ಗುಂಟೆ ಮತ್ತು ಅದರಲ್ಲಿರುವ ಪಂಪ್ ಸೆಟ್ ವಾದಿ ಮತ್ತು ಪ್ರತಿವಾದಿಗೆ ಆದ ಪಾರಿಕತ್ತಿನಲ್ಲಿ ಪ್ರತಿವಾದಿಗೆ ಸೇರತಕ್ಕದ್ದೆಂದು ಮತ್ತು ಈ ದಾವಾ ಸ್ವತ್ತು ಪ್ರತಿವಾದಿಗೆ ಸೇರತಕ್ಕದ್ದೆಂದು ಎಲ್ಲ ಸಾಲಗಳನ್ನು ಪ್ರತಿವಾದಿಯೇ ತೀರಿಸಿಕೊಳ್ಳುವುದು ಮತ್ತು ಪ್ರತಿವಾದಿಯ ಹೆಂಡತಿ ರತ್ನಮ್ಮ  ಹೆಸರಿನಲ್ಲಿರುವ ಸ್ವತ್ತುಗಳು ಅವಳಿಗೆ ಸೇರತಕ್ಕದ್ದೆಂದು ಒಪ್ಪಿ ಪಾಲು ವಿಭಾಗ ಮಾಡಿಕೊಂಡಿದ್ದು ಅದರಂತೆ ವಿಭಾಗ ಪತ್ರದ ರೀತ್ಯಾ ಪ್ರತಿವಾದಿಯ ಹೆಸರಿಗೆ ಚನ್ನರಾಯಪಟ್ಟಣ ಪುರಸಭೆಯಲ್ಲಿ ಖಾತೆ ಆಗಿದ್ದು ಆ ಲಾಗಾಯ್ತು ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು ಕುಟುಂಬದಲ್ಲಿ ವಿಭಾಗ ಆದ ನಂತರ ವಾದಿ ಮತ್ತು ಪ್ರತಿವಾದಿಯು  ಅವರವರ ಸ್ವತ್ತನ್ನು ಖಾತೆ ಮಾಡಿಸಿಕೊಂಡು ಹಲವಾರು ಜನರಿಗೆ ಮಾರಾಟ ಸಹ ಮಾಡಿದ್ದು ಅದೇ ರೀತಿ ವಾದಿಯು ಸಹ ಆತನಿಗೆ ಬಂದ ಹಿಸ್ಸೆಯಲ್ಲಿ ಕೆಲವು ಸ್ವತ್ತುಗಳನ್ನು ಮಾರಾಟ ಮಾಡಿದ್ದು, ಸದರಿ ವಿಚಾರವನ್ನು ನಮೂದಿಸದೇ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ.

6. ಅಲ್ಲದೇ ಪ್ರತಿವಾದಿಯ ಹಿಸ್ಸೆಗೆ ಬಂದ ಜಮೀನುಗಳಿಗೆ ತಂಟೆ ಮಾಡಿಸಿದ್ದರಿಂದ ಪ್ರತಿವಾದಿಯು ವಾದಿಯ ವಿರುದ್ಧ ಕೆ.ಆರ್,ಪೇಟೆ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 170/2015 ರಲ್ಲಿ ದಾವಾ ಸಲ್ಲಿಸಿದ್ದು ಅದಕ್ಕೆ ವಿರುದ್ಧವಾಗಿ ವಾದಿಯು ದಾವಾ ಸ್ವತ್ತನ್ನು ಲಪಟಾಯಿಸಬೇಕೆಂಬ ದೃಷ್ಟಿಯಿಂದ ಮತ್ತು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವಾ ಸಲ್ಲಿಸಿರುತ್ತಾರೆ. ಅಲ್ಲದೇ

ಪ್ರತಿವಾದಿಯು ಬ್ಯಾಂಕಿನಲ್ಲಿ ನೌಕರನಾಗಿದ್ದು, ಆತನಿಗೆ ಬಂದ ಆದಾಯದಿಂದ ಹಲವಾರು ಆಸ್ತಿಗಳನ್ನು ತನ್ನ ಮತ್ತು ತನ್ನ ಹೆಂಡತಿಯ ಹೆಸರಿಗೆ ಖರೀದಿ ಮಾಡಿದ್ದು ಇದನ್ನು ಸಹಿಸದ ವಾದಿಯು ದುರುದ್ದೇಶದಿಂದ ಸದರಿ ಎಲ್ಲಾ ಅಂಶಗಳನ್ನು ಮರೆ ಮಾಚಿ ಸುಳ್ಳು ದಾವಾ ಸಲ್ಲಿಸಿರುತ್ತಾರೆ. ದಾವಾವು ಹಕ್ಕು ಘೋಷಣೆ ದಾವಾ ಆಗಿದ್ದು ಆವಶ್ಯಕ ಪಾರ್ಟಿಗಳನ್ನು ಅಂದರೆ ವಾದಿಯರ ಸಹೋದರರನ್ನು ಪಾರ್ಟಿ ಮಾಡದೇ ತಂದಿರುವ ದಾವೆಯು ನಿಲ್ಲತಕ್ಕದ್ದಾಗಿರುವುದಿಲ್ಲ. ಪ್ರತಿವಾದಿಯು 1993 ರಲ್ಲಿ ಖಾತೆ ಮಾಡಿಸಿಕೊಂಡಿದ್ದು ಅದನ್ನು ಪ್ರಶ್ನಿಸದೇ ತಂದಿರುವ ದಾವೆಯು ಕಾಲಮಿತಿ ಭಾದಕದಿಂದ ಕೂಡಿರುತ್ತದೆ. ಆದ್ದರಿಂದ ಸದರಿ ದಾವೆಯನ್ನು ಖರ್ಚಿನೊಂದಿಗೆ ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

7. ವಾದಪತ್ರ ಹಾಗೂ ಪ್ರತಿವಾದ ಪತ್ರದ ಸಂಗತಿಗಳ ಆಧಾರದ ಮೇಲೆ ಈ ನ್ಯಾಯಾಲಯದ ಹಿಂದಿನ ಪೂರ್ವ ಪೀಠಾಧಿಕಾರಿಗಳು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆ.

## ವಿವಾದಾಂಶಗಳು

1. **ವಾದಿಯು, ದಾವಾ ಸ್ವತ್ತಿನ ಹಕ್ಕುದಾರ, ಮಾಲೀಕ, ಸ್ವಾಧೀನದಾರ ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?**

2. **ವಾದಿಯು, ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾನೆ ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?**

3. **ವಾದಿಯು ದಾವಾ ಸ್ವತ್ತಿನ ಹಕ್ಕುದಾರ ಎಂದು ಘೋಷಣೆ ಪಡೆಯಲು ಅರ್ಹರಿದ್ದಾರೆಯೇ ?**

4. **ವಾದಿಯು ದಾವೆಯಲ್ಲಿ ಕೇಳಿರುವಂತೆ ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರ ಪಡೆಯಲು ಅರ್ಹರೇ?**

5. **ಯಾವ ಆದೇಶ ಅಥವಾ ಡಿಕ್ರಿ ?**

8. ವಾದಿಯು ತನ್ನ ದಾವೆಯನ್ನು ರುಜುವಾತುಪಡಿಸಲು ತನ್ನನ್ನು ತಾನು ಪಿ.ಡಬ್ಲ್ಯೂ-1

ಎಂದು, ತನ್ನ ಪರ ಎಲ್.ವಿ. ಗೋವಿಂದರಾಜು ರವರನ್ನು ಪಿ.ಡಬ್ಲ್ಯೂ-2 ಎಂದು ನುಡಿ ಸಾಕ್ಷ್ಯವನ್ನು ಮಾಡಿಕೊಂಡಿರುತ್ತಾರೆ. ದಾಖಲೆಗಳನ್ನು ನಿಪಿ-1 ರಿಂದ 7 ಎಂದು ಗುರುತಿಸಿಕೊಂಡಿರುತ್ತಾರೆ. ಮತ್ತು ವಾದಿಯ ಪರ ವಿಚಾರಣೆ ಮುಕ್ತಾಯಗೊಳಿಸಿಕೊಂಡಿರುತ್ತಾರೆ.

9. ಪ್ರತಿವಾದಿ ತನ್ನ ಪ್ರತಿವಾದವನ್ನು ರುಜುವಾತುಪಡಿಸಲು ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು, ತನ್ನ ಪರ ಹೆಚ್. ಟಿ. ರಾಜೇಗೌಡರವರನ್ನು ಪಿ.ಡಬ್ಲ್ಯೂ-2 ಎಂದು ನುಡಿ ಸಾಕ್ಷ್ಯವನ್ನು ಮಾಡಿಕೊಂಡಿರುತ್ತಾರೆ. ದಾಖಲೆಯನ್ನು ನಿಡಿ-1 ರಿಂದ 24 ಎಂದು ಗುರುತಿಸಿಕೊಂಡಿರುತ್ತಾರೆ ಮತ್ತು ಪ್ರತಿವಾದಿಯ ಪರ ವಿಚಾರಣೆ ಮುಕ್ತಾಯಗೊಳಿಸಿಕೊಂಡಿರುತ್ತಾರೆ.

10. ವಾದಿ ಮತ್ತು ಪ್ರತಿವಾದಿಯ ಪರ ವಕೀಲರ ವಾದವನ್ನು ಆಲಿಸಿದ್ದೇನೆ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ.

11. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

| | |
|---|---|
| 1 ನೇ ವಿವಾದಾಂಶಃ | **ಸಕಾರಾತ್ಮಕವಾಗಿ** |
| 2 ನೇ ವಿವಾದಾಂಶಃ | **ನಕಾರಾತ್ಮಕವಾಗಿ** |
| 3 ನೇ ವಿವಾದಾಂಶಃ | **ಸಕಾರಾತ್ಮಕವಾಗಿ** |
| 4 ನೇ ವಿವಾದಾಂಶಃ | **ನಕಾರಾತ್ಮಕವಾಗಿ** |
| 5 ನೇ ವಿವಾದಾಂಶಃ | ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ |

::**ಕಾರಣಗಳುಃ-**

**12. ವಿವಾದಾಂಶ 1 ಮತ್ತು 3:** ಈ ಎರಡು ಅಂಶಗಳ ಮೇಲಿನ ಚರ್ಚೆಯು ಒಂದಕ್ಕೊಂದು ಅವಲಂಬಿತವಾಗಿರುವುದರಿಂದ, ವಾಕ್ಯಗಳ ಪುನರಾವರ್ತನೆಯನ್ನು ತಡೆಯಲು ಅವುಗಳನ್ನು ಇಲ್ಲಿ ಒಟ್ಟಿಗೆ ಚರ್ಚೆಗೆ ತೆಗದುಕೊಳ್ಳಲಾಗಿದೆ.

13. ವಾದಿಯ ನಿರ್ಧಿಷ್ಟ ವಾದವೇನೆಂದರೆ, ದಾವಾ ಸ್ವತ್ತನ್ನು ವಾದಿಯು ದಿಃ 22-10-1981 ರಂದು ರಂಗೇಗೌಡರ ಮಗನಾದ ಸಿ.ಆರ್ ರಂಗಪ್ಪರವರಿಂದ ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದು ಖಾತೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ. ಪ್ರತಿವಾದಿಗೆ ದಾವಾ ಸ್ವತ್ತಿನ ಯಾವುದೇ ಹಕ್ಕು, ಸ್ವಾಧೀನ ಇಲ್ಲದೇ ಇದ್ದರೂ ಪುರಸಭಾ ಅಧಿಕಾರಿಗಳೊಂದಿಗೆ ಷರೀಖಾಗಿ ದಾವಾ ಸ್ವತ್ತಿನ ಖಾತೆಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತಿನ ವಾದಿಯ ಸ್ವಾಧೀನಕ್ಕೆ ತಂಟೆ ತಕರಾರು ಉಂಟು ಮಾಡುತ್ತಿದ್ದಾರೆ ಎಂದು ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ.

14. ವಾದಿಯು ವಿವಾದಾಂಶ 1 ನ್ನು ರುಜುವಾತುಪಡಿಸಲು ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡಿದ್ದಾರೆ. ದಾಖಲೆಗಳಾದ ನಿಪಿ-1 ರಿಂದ 7 ನ್ನು ಗುರುತಿಸಿಕೊಂಡಿರುತ್ತಾರೆ. ನಿಪಿ-1 ಮತ್ತು 2 ಆಸ್ತಿ ತೆರಿಗೆ ರಿಜಿಸ್ಟರ್ ಆಗಿದ್ದು, ದಾವಾ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿರುವುದು ಕಂಡು ಬರುತ್ತದೆ. ನಿಪಿ-3 ರಿಂದ 5 ದಾವಾ ಸ್ವತ್ತಿನ ಋಣಭಾರರಾಹಿತ್ಯ ಪ್ರಮಾಣ ಪತ್ರವಾಗಿರುತ್ತದೆ. ನಿಪಿ-6 ದಿಃ 22-10-1981 ರ ದೃಢೀಕೃತ ಕ್ರಯಪತ್ರವಾಗಿದ್ದು ದಾವಾ ಸ್ವತ್ತನ್ನು ವಾದಿಯ ಹೆಸರಿಗೆ ರಂಗೇಗೌಡನ ಮಗ ಸಿಆರ್ ರಂಗಪ್ಪ ಕ್ರಯಪತ್ರ ಬರೆದುಕೊಟ್ಟಿರುವುದು ಕಂಡು ಬರುತ್ತದೆ ನಿಪಿ-7 ದಿಃ 22-10-1981 ರ ದೃಢೀಕೃತ ಕ್ರಯಪತ್ರವಾಗಿರುತ್ತಧೆ

15. ಪ್ರತಿವಾದಿಯು ತನ್ನನ್ನು ತಾನು ಡಿ.ಡಬ್ಲ್ಯೂ-1 ಎಂದು ವಿಚಾರಣೆ ಮಾಡಿಕೊಂಡಿದ್ದು, ತನ್ನ ಪರವಾಗಿ ನಿಡಿ-1 ರಿಂದ 24 ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ನಿಡಿ-1 ಪಹಣಿಯಾಗಿದ್ದು ಸರ್ವೆ.ನಂ. 56/ಎ2 ಪಿ2 , 1 ಎಕರೆ 32 ಗುಂಟೆ ಸ್ವತ್ತು ವಾದಿಗೆ ವಿಭಾಗದ ಮೂಲಕ ಬಂದಿರುವುದು ಕಂಡು ಬರುತ್ತದೆ. ನಿಡಿ-2 ಪಹಣಿಯಾಗಿದ್ದು ಸರ್ವೆ. ನಂ. 56/1 ಎ 2 ಎಕರೆ 8 ಗುಂಟೆ ಸ್ವತ್ತು ವಾದಿಗೆ ಹಕ್ಕು ಬಿಡುಗಡೆ ಮೂಲಕ ಬಂದಿರುವುದು ಕಂಡು ಬರುತ್ತದೆ. ನಿಡಿ-3 ದೃಢೀಕೃತ ಹಕ್ಕು ಖುಲಾಸೆ ಪತ್ರ ಆಗಿದ್ದು, ಸರ್ವೆ. 56/1 ಎ ನಲ್ಲಿ 2 ಎಕರೆ 8 ಗುಂಟೆ ಸ್ವತ್ತನ್ನು ವಾದಿಗೆ ವಾದಿಯ ಅಣ್ಣ ಎಲ್. ವಿ ಕೃಷ್ಣೇಗೌಡರವರು ಹಕ್ಕು ಖುಲಾಸೆ ಬರೆದುಕೊಟ್ಟಿರುವುದು ಕಂಡು ಬರುತ್ತದೆ. ನಿಡಿ-4 ಸ್ವಯ ಘೋಷಿತ ಆಸ್ತಿ ತೆರಿಗೆಯಾಗಿರುತ್ತದೆ. ನಿಡಿ-5 ದೃಢೀಕೃತ

ಕ್ರಯಪತ್ರ , ನಿಡಿ-6 ಆಸ್ತಿ ತೆರಿಗೆ ರಿಜಿಸ್ಟರ್ ಆಗಿದ್ದು ದಾವಾ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಡಿ-7 ನಮೂನೆ-3 ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಿಡಿ-8 ದೃಢೀಕೃತ ಕ್ರಯಪತ್ರ, ನಿಡಿ-9 ಕ್ರಯಪತ್ರದ ದೃಢೀಕೃತ ನಕಲು, ನಿಡಿ-10 ಮತ್ತು 11 ಋಣಭಾರ ರಾಹಿತ್ಯ, ನಿಡಿ-12 ರಿಂದ 19 ಪಹಣಿಗಳು, ನಿಡಿ-20 ದೃಢೀಕೃತ ಎಂ.ಆರ್. ನಿಡಿ-21 ಅಸಲು ದಾವಾ ನಂ. 170/15 ರ ದೃಢೀಕೃತ ವಾದ ಪತ್ರ, ನಿಡಿ-22 ಅಸಲು ದಾವಾ ನಂ. 594/2012 ರ ತೀರ್ಪು ಮತ್ತು ಡಿಕ್ರಿಯಾಗಿದ್ದು ದಾವಾ ಸ್ವತ್ತು ಪ್ರತಿವಾದಿಗೆ ಡಿಕ್ರಿಯಾಗಿರುವುದು ಕಂಡು ಬರುತ್ತದೆ ನಿಡಿ-23 ಪಂಚಾಯತಿ ಪಾಲುಪಟ್ಟಿ, ನಿಡಿ-24 ಪಹಣಿಯಾಗಿರುತ್ತದೆ.

16. ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದು ನಮ್ಮ ಕುಟುಂಬದಲ್ಲಿ ಒಬ್ಬರಿಗೊಬ್ಬರಿಗೆ ಸರಿ ಬರದ ಕಾರಣ ದಾವಾ ಸ್ವತ್ತು ಮತ್ತು ವಾದಿಯ ತಂದೆಯ ಇತರ ಸ್ವತ್ತುಗಳನ್ನು ದಿಃ 26-05-1993 ರಂದು ಪಂಚಾಯತಿ ಪಾರಿಕತ್ತನ್ನು ಮಾಡಿಕೊಂಡಿರುತ್ತಾರೆ. ಸದರಿ ಪಾಲು ಪಟ್ಟಿಯಂತೆ ದಾವಾ ಸ್ವತ್ತು ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ. ಅದರಂತೆ ಪ್ರತಿವಾದಿಯು ಪುರಸಭೆಯಲ್ಲಿ ಖಾತೆ ಮಾಡಿಸಿಕೊಂಡು ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದು ತಿಳಿಸಿರುತ್ತಾರೆ. ಪ್ರತಿವಾದಿಯು ವಾದಿಯ ವಿರುದ್ಧ ಕೆ.ಆರ್,ಪೇಟೆ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 170/2015 ನ್ನು ದಾಖಲಿಸಿದ್ದು ಅದಕ್ಕೆ ವಿರುದ್ಧವಾಗಿ ವಾದಿಯು ದಾವಾ ಸ್ವತ್ತನ್ನು ಲಪಟಾಯಿಸಲು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾಖಲಿಸಿರುತ್ತಾರೆ ಎಂದು ತಿಳಿಸಿರುತ್ತಾರೆ. ಪ್ರತಿವಾದಿಯು ಹಾಜರುಪಡಿಸಿರುವ ನಿಡಿ-22 ನ್ನು ಪರಿಶೀಲಿಸಲಾಗಿ ಅಸಲು ದಾವಾ ನಂ. 594/2012 ದಾವೆಯ ತೀರ್ಪಿನ ದೃಢೀಕೃತ ನಕಲಾಗಿರುತ್ತದೆ. ಸದರಿ ದಾವೆಯನ್ನು ಪ್ರತಿವಾದಿಯು ವಾದಿಯಾಗಿ ಇತರೆ ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ಅಧಿಕ ಸಿವಿಲ್ ನ್ಯಾಯಾಲಯ ಚನ್ನರಾಯಪಟ್ಟಣದಲ್ಲಿ ದಾಖಲಿಸಿದ್ದು, ದಾವಾ ಸ್ವತ್ತು ದಿಃ 22-10-1981 ರ ಕ್ರಯಪತ್ರದ ಮೂಲಕ ಪ್ರತಿವಾದಿಯ ತಮ್ಮ ತಿಮ್ಮೇಗೌಡನಿಗೆ ಸಿ.ಆರ್.ರಂಗಪ್ಪರವರಿಂದ ಕ್ರಯಪತ್ರದ ಮೂಲಕ ಬಂದಿರುತ್ತದೆ ಸದರಿ ಸ್ವತ್ತು ಈ ದಾವೆಯ ಪ್ರತಿವಾದಿಗೆ ದಿಃ 26-05-1993 ರ ಪಂಚಾಯತಿ ಪಾಲುಪಟ್ಟಿಯ ಮೂಲಕ ಬಂದಿದ್ದು, ದಿಃ 19-05-1999 ರಲ್ಲಿ ಪುರಸಭೆ ಮುಖ್ಯಾಧಿಕಾರಿಯವರ ಆದೇಶದಂತೆ ಖಾತೆಯಾಗಿರುತ್ತದೆ. ಅಸಲು ದಾವಾ ನಂ. 594/2012 ರ ದಾವೆಯಲ್ಲಿ ಈ ದಾವೆಯ ಪ್ರತಿವಾದಿ ವಾದಿಯಾಗಿ ನ್ಯಾಯಾಲಯಕ್ಕೆ

ಹಾಜರುಪಡಿಸಿರುವ ದಾಖಲೆಗಳನ್ನು ಪರಿಗಣಿಸಿ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾನೆ ಎಂದು ಅಸಲು ದಾವಾ ನಂ 594/2012 ರ ದಾವೆಯನ್ನು ನ್ಯಾಯಾಲಯ ಡಿಕ್ರಿ ಮಾಡಿರುವುದು ಕಂಡು ಬರುತ್ತದೆ ದಿಃ 22-10-1981 ರ ಕ್ರಯಪತ್ರದ ಮೂಲಕ ದಾವಾ ಸ್ವತ್ತು ವಾದಿಯ ಹೆಸರಿಗೆ ಬಂದಿರುವುದನ್ನು ಪ್ರತಿವಾದಿಯು ಒಪ್ಪಿಕೊಂಡಿರುತ್ತಾರೆ. ದಿಃ 22-10-1981 ರ ಕ್ರಯಪತ್ರದ ಮೂಲಕ ವಾದಿಯು ದಾವಾ ಸ್ವತ್ತಿನ ಹಕ್ಕುದಾರರಾಗಿರುವುದು ಕಂಡು ಬರುತ್ತದೆ. ಆದ್ದರಿಂದ ವಾದಿಯು ದಾವಾ ಸ್ವತ್ತಿನ ಹಕ್ಕುದಾರ ಎಂದು ಅಭಿಪ್ರಾಯಪಟ್ಟು ವಿವಾದಾಂಶ 1 ಮತ್ತು 3 ನ್ನು **ಸಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

**17. ವಿವಾದಾಂಶಃ 2 ಮತ್ತು 4:** ಈ ಎರಡು ಅಂಶಗಳ ಮೇಲಿನ ಚರ್ಚೆಯು ಒಂದಕ್ಕೊಂದು ಅವಲಂಬಿತವಾಗಿರುವುದರಿಂದ, ವಾಕ್ಯಗಳ ಪುನರಾವರ್ತನೆಯನ್ನು ತಡೆಯಲು ಅವುಗಳನ್ನು ಇಲ್ಲಿ ಒಟ್ಟಿಗೆ ಚರ್ಚೆಗೆ ತೆಗದುಕೊಳ್ಳಲಾಗಿದೆ.

18. ವಾದಿಗೆ ದಾವಾ ಸ್ವತ್ತು 22-10-1981 ರ ನೋಂದಾಯಿತ ಕ್ರಯಪತ್ರದ ಮೂಲಕ ಬಂದಿದ್ದು ದಾವಾ ಸ್ವತ್ತನ್ನು ಖಾತೆ ಮಾಡಿಸಿಕೊಂಡು, ಕಂದಾಯ ಪಾವತಿಸಿಕೊಂಡು ವಾದಿಯೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದು ತಿಳಿಸಿರುತ್ತಾರೆ. ಪ್ರತಿವಾದಿಯು ದಾವಾ ಸ್ವತ್ತು ದಿಃ 26-05-1993 ರ ಪಂಚಾಯತಿ ಪಾರಿಕತ್ತಿನ ಮೂಲಕ ದಾವಾ ಸ್ವತ್ತು ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ. ದಾವಾ ಸ್ವತ್ತನ್ನು ಪ್ರತಿವಾದಿಯು ಖಾತೆ ಮಾಡಿಸಿಕೊಂಡು ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದು ತಿಳಿಸಿರುತ್ತಾರೆ.

19. ವಾದಿಯನ್ನು ಪ್ರತಿವಾದಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಅವರು ಒಪ್ಪಿಕೊಂಡ ಆಯ್ದು ಭಾಗಗಳನ್ನು ಉಲ್ಲೇಖಪಡಿಸಬಯಸುತ್ತೇನೆ. " **ಪ್ರತಿವಾದಿ ನನ್ನ ವಿರುದ್ಧ ಕೆ.ಆರ್.ಪೇಟೆ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದಾರೆ. ಪ್ರತಿವಾದಿ ಪಾಲುಪಾರಿಕತ್ತು ಮೂಲಕ ತನ್ನ ಭಾಗದ ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದಾರೆ. ಮೇಲ್ಕಂಡ ನಮ್ಮ ಕುಟುಂಬದ ಪಾಲುಪಾರಿಕತ್ತಿನಲ್ಲಿ ದಾವಾ ಸ್ವತ್ತು ಸೇರಿಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಎಲ್ಲಾ ಕ್ರಯಕ್ಕೆ ಪಡೆದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದೇವೆ."** ಎಂದು ನುಡಿದಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಪಹಣಿಗಳನ್ನು ತೋರಿಸಲಾಗಿ

ಅವುಗಳು ತನ್ನ ಹೆಸರಿನಲ್ಲಿದೆ ಎಂದು ಒಪ್ಪಿಕೊಂಡ ಮೇರೆಗೆ ನಿಡಿ-1 ಮತ್ತು 2 ನ್ನು ಗುರುತಿಸಲಾಗಿದೆ. ಸದರಿ ಸ್ವತ್ತುಗಳು ದಿಃ 26-05-1993 ರ ಪಾಲುಪಟ್ಟಿಯಂತೆ ವಾದಿಯ ಹಿಸ್ಸೆಗೆ ಬಂದಿರುವುದು ಕಂಡು ಬರುತ್ತದೆ. ನನ್ನ ವಿರುದ್ಧ ಪ್ರತಿವಾದಿ ಕೆ.ಆರ್.ಪೇಟೆ ನ್ಯಾಯಾಲಯದಲ್ಲಿ ತನ್ನ ಭಾಗಕ್ಕೆ ಬಂದ ಸ್ವತ್ತುಗಳಿಗೆ ನಾನು ತೊಂದರೆ ನೀಡುತ್ತಿದ್ದೇನೆ ಎಂದು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿಸಿದ್ದಾರೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ.

20. ಪಿ.ಡಬ್ಲ್ಯೂ-2 ಎಲ್.ವಿ. ಗೋವಿಂದರಾಜುರವರು ವಾದಿ ಮತ್ತು ಪ್ರತಿವಾದಿಯ ಸಹೋದರರಾಗಿದ್ದು ಇವರು ತಮ್ಮ ಪಾಟೀಸವಾಲಿನಲ್ಲಿ " **ನಮ್ಮ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದೇವೆ. ನಮ್ಮ ನಮ್ಮ ಭಾಗದ ಸ್ವತ್ತುಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದೇವೆ ಎಂದರೆ ಸರಿ. ಸದರಿ ವಿಭಾಗವನ್ನು ದಿಃ 26-05-1993 ರಲ್ಲಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ಪಾರಿಕತ್ತಿನಲ್ಲಿನಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸರಿ ಇರುತ್ತವೆ. ಸದರಿ ಪಾರಿಕತ್ತಿನಲ್ಲಿ ವಾದಿ ಕ್ರಯಕ್ಕೆ ಪಡೆದಿರುವ ಸ್ವತ್ತುಗಳನ್ನು ಸಹಾ ಸೇರಿಸಿ ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ."** ಎಂದು ಒಪ್ಪಿಕೊಂಡಿರುತ್ತಾರೆ. ಪಿ.ಡಬ್ಲ್ಯೂ-2 ರವರು ತಮ್ಮ ಪಾಟೀಸವಾಲಿನಲ್ಲಿ ಕುಟುಂಬದ ಸ್ವತ್ತುಗಳು ದಿಃ 26-05-1993 ರಲ್ಲಿ ವಿಭಾಗವಾಗಿದ್ದು, ಪಾರಿಕತ್ತಿನಂತೆ ನಮ್ಮ ಭಾಗದ ಸ್ವತ್ತುಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದೇವೆ ಎಂದು ಒಪ್ಪಿಕೊಂಡಿರುತ್ತಾರೆ.

21. ಪ್ರತಿವಾದಿಯು ಹಾಜರುಪಡಿಸಿರುವ ನಿಡಿ-23 ಪಾಲುಪಟ್ಟಿಯನ್ನು ಪರಿಶೀಲಿಸಿದಾಗ ಹಳೇ ಖಾತೆ ಸಂಖ್ಯೆ 1634 ಎಲ್.ವಿ. ವೆಂಕಟರಾಮುವಿಗೆ ಸೇರಿತಕ್ಕದ್ದು ಎಂದು ನಮೂದಾಗಿರುತ್ತದೆ. ವಾದಿಯು ಹಾಜರುಪಡಿಸಿರುವ ನಿಪಿ-1 ಖಾತಾ ಎಕ್ಸ್ ಟ್ರಾಕ್ಟನ್ನು ಪರಿಶೀಲಿಸಲಾಗಿ ದಾವಾ ಸ್ವತ್ತಿನ ಆಸ್ತಿ ನಂ. 1634 ವಿಸ್ತೀರ್ಣ 69x19½ ಪ್ರತಿವಾದಿಯ ಹೆಸರಿಗೆ ಖಾತೆಯಾಗಿರುವುದು ಕಂಡು ಬರುತ್ತದೆ. ನಿಪಿ-2 ಆಸ್ತಿ ತೆರಿಗೆ ರಿಜಿಸ್ಟರ್ ಆಗಿದ್ದು ಪ್ರತಿವಾದಿಯ ಹೆಸರಿನಲ್ಲಿ ಖಾತೆಯಿರುವುದು ಕಂಡು ಬರುತ್ತದೆ. ಪ್ರತಿವಾದಿಯು ಹಾಜರುಪಡಿಸಿರುವ ನಿಡಿ-22 ಅಸಲು ದಾವಾ ನಂ. 594/2012 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲಾಗಿದ್ದು ಅದನ್ನು ಪರಿಶೀಲಿಸಲಾಗಿ ಪ್ರತಿವಾದಿಯು ಪ್ರಸ್ತುತ ದಾವೆಯ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಇತರರ ವಿರುದ್ಧ ಅಧಿಕ ಸಿವಿಲ್ ನ್ಯಾಯಾಲಯ, ಚನ್ನರಾಯಪಟ್ಟಣದಲ್ಲಿ ದಾವೆ ದಾಖಲಿಸಿ ದಿಃ 27-10-2014 ರಂದು ಡಿಕ್ರಿ ಪಡೆದಿರುತ್ತಾರೆ

ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರು ತಂಟೆ ತಕರಾರು ಮಾಡದಂತೆ ಪ್ರಸ್ತುತ ದಾವೆಯ ಪ್ರತಿವಾದಿಗೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ನೀಡಿರುತ್ತದೆ.

22. ಅಸಲು ದಾವಾ ನಂ. 594/2012 ರ ತೀರ್ಪು ಮತ್ತು ಡಿಕ್ರಿಯನ್ನು ವಾದಿಯು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ವಾದಿಯು ತಮ್ಮ ಕುಟುಂಬದಲ್ಲಾದ 26-05-1993 ರ ಪಾಲುಪಟ್ಟಿಯನ್ನು ಪಾಟೀಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ದಾವಾ ಸ್ವತ್ತು ಪ್ರತಿವಾದಿಯ ಹೆಸರಿಗೆ ಹಿಸ್ಸೆಯಲ್ಲಿ ಬಂದಿದ್ದು, ಖಾತೆಯಾಗಿರುವುದನ್ನು ವಾದಿಯು ಅಲ್ಲಗಳೆದಿರುತ್ತಾರೆ. ಆದರೆ ದಾವಾ ಸ್ವತ್ತು ಪ್ರತಿವಾದಿಯ ಹೆಸರಿಗೆ ಖಾತೆಯಾಗಿರುವುದನ್ನು ಮತ್ತು ದಿಃ 26-05-1993 ರ ಪಾಲುಪಟ್ಟಿಯನ್ನು ಪ್ರಶ್ನಿಸಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದು ಕಂಡು ಬರುತ್ತದೆ. ಆದ್ದರಿಂದ ದಾವೆಯಲ್ಲಿ ಕೋರಿರುವಂತೆ ವಾದಿಯು ಪರಿಹಾರ ಪಡೆಯಲು ಅರ್ಹರಲ್ಲ ಎಂದು ಅಭಿಪ್ರಾಯಪಟ್ಟು ವಿವಾದಾಂಶ 2 ಮತ್ತು 4 ನ್ನು **ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

23. **ವಿವಾದಾಂಶಃ 5** ಈ ಮೇಲಿನ ಅಂಶಗಳಿಗೆ ಹೇಳಲಾದ ಕಾರಣಗಳಿಂದ ಹಾಗೂ ಅವುಗಳಿಗೆ ನೀಡಲಾದ ಉತ್ತರಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

-**ಆದೇಶಃ**

***ವಾದಿಯ ದಾವೆಯನ್ನು ಖರ್ಚಿನೊಂದಿಗೆ ವಜಾ ಮಾಡಲಾಗಿದೆ.***

***ಈ ಮೇಲಿನ ಆದೇಶದಂತೆ ಡಿಕ್ರಿಯನ್ನು ಬರೆಯುವುದು.***

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನವನ್ನು ಕೊಟ್ಟು, ಆಕೆಯು ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿದ ನಂತರ ತಪ್ಪಿದ್ದಲ್ಲಿ ತಿದ್ದಿ ಇಂದು ದಿನಾಂಕ 12 ನೇ ಜನವರಿ 2020 ರಂದು ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

: **ಅನುಬಂಧ** :

1. ವಾದಿಯ ಪರ ವಿಚಾರಿಸಲಾದ ಸಾಕ್ಷಿಗಳುঃ

| | | |
|---|---|---|
| ಪಿ. ಡಬ್ಲ್ಯೂ-1 | : | ತಿಮ್ಮೇಗೌಡ |
| ಪಿ.ಡಬ್ಲ್ಯೂ-2 | : | ಗೋವಿಂದರಾಜು |

2. ವಾದಿಯ ಪರ ಗುರುತಿಸಲಾದ ದಾಖಲೆಗಳುঃ

| | | |
|---|---|---|
| ನಿಶಾನೆ ಪಿ-1 ಮತ್ತು 2 | : | ಆಸ್ತಿ ತೆರಿಗೆ ರಿಜಿಸ್ಟರ್ |
| ನಿಶಾನೆ ಪಿ-3 | : | ಋಣಭಾರ ರಾಹಿತ್ಯ ಪ್ರಮಾಣ ಪತ್ರ |
| ನಿಶಾನೆ ಪಿ-4 ಮತ್ತು 5 | : | 2 ಇ.ಸಿ |
| ನಿಶಾನೆ ಪಿ-6 ಮತ್ತು 7 | : | ದೃಢೀಕೃತ ಕ್ರಯಪತ್ರ |

3. ಪ್ರತಿವಾದಿಯರ ಪರ ವಿಚಾರಿಸಲಾದ ಸಾಕ್ಷಿಗಳುঃ

| | | |
|---|---|---|
| ಡಿ-ಡಬ್ಲ್ಯೂ-1 | : | ವೆಂಕಟರಾಮು |
| ಡಿ.ಡಬ್ಲ್ಯೂ-2 | : | ಹೆಚ್.ಟಿ. ರಾಜೇಗೌಡ |

4. ಪ್ರತಿವಾದಿಯರ ಪರವಾಗಿ ಹಾಜರು ಪಡಿಸಿದ ದಾಖಲೆಗಳುঃ

| | | |
|---|---|---|
| ನಿಶಾನೆ ಡಿ-1 ಮತ್ತು 2 | : | ಪಹಣಿ |
| ನಿಶಾನೆ ಡಿ-3 | : | ಹಕ್ಕು ಖುಲಾಸೆ ಪತ್ರ |
| ನಿಶಾನೆ ಡಿ-4 | : | ಆಸ್ತಿ ತೆರಿಗೆ ರಿಜಿಸ್ಟರ್ |
| ನಿಶಾನೆ ಡಿ-5 | : | ದಿঃ 22-10-1981 ರ ಕ್ರಯಪತ್ರದ ದೃಢೀಕೃತ ನಕಲು |
| ನಿಶಾನೆ ಡಿ-6 ಮತ್ತು 7 | : | ಆಸ್ತಿ ತೆರಿಗೆಯ ದೃಢೀಕೃತ ನಕಲು |
| ನಿಶಾನೆ ಡಿ-8 | : | ದಿঃ 27-11-2013 ರ ಕ್ರಯಪತ್ರದ ದೃಢೀಕೃತ ನಕಲು |
| ನಿಶಾನೆ ಡಿ-9 | : | ದಿঃ 12-02-2018 ರ ಕ್ರಯಪತ್ರದ ದೃಢೀಕೃತ ನಕಲು |

| | | |
|---|---|---|
| ನಿಶಾನೆ ಡಿ-10 ಮತ್ತು 11 | : | ಋಣಭಾರ ರಾಹಿತ್ಯ ಪತ್ರ |
| ನಿಶಾನೆ ಡಿ-12 ರಿಂದ 19 | : | 8 ಆರ್.ಟಿ.ಸಿಯ ದೃಢೀಕೃತ ನಕಲು |
| ನಿಶಾನೆ ಡಿ-20 | : | ಎಂ.ಆರ್. ನ ದೃಢೀಕೃತ ನಕಲು |
| ನಿಶಾನೆ ಡಿ-21 | : | ಅಸಲು ದಾವಾ ನಂ. 170/2015 ರ ವಾದ ಪತ್ರದ ದೃಢೀಕೃತ ನಕಲು |
| ನಿಶಾನೆ ಡಿ-22 | : | ಅಸಲು ದಾವಾ ನಂ. 594/2012 ರ ಜಡ್ಜ್‌ಮೆಂಟ್ ಮತ್ತು ಡಿಕ್ರಿ |
| ನಿಶಾನೆ ಡಿ-23 | : | ಪಾಲುಪಟ್ಟಿ |
| ನಿಶಾನೆ ಡಿ-24 | : | ಆರ್.ಟಿ.ಸಿ |

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.